ತಮಿಳುನಾಡಿನ ನಾಯನಾರ್ ಸಂತರು - ೧೪

# ಶಿವನ ನರ್ತನವನ್ನೇ ಬದಲಾಯಿಸಿದ ಪಾಂಡ್ಯ ದೊರೆ

ಕಥೆ :ಎ. ಜ್ಯೋತಿ ಮತ್ತು ಎಂ ಜಯಶ್ರೀ
ಚಿತ್ರ : ಪದ್ಮವಾಸನ್

1

ಮದುರೈ ಪಟ್ಟಣದಲ್ಲಿ ಶಿವನು ಹಲವಾರು ಲೀಲೆಗಳನ್ನು ಮಾಡಿದ. ಇವುಗಳನ್ನು ವಿಸ್ತಾರವಾಗಿ ವರ್ಣಿಸುವ ತಿರುವಿಳೈಯಾಡಲ್ ಪುರಾಣವೆಂಬ ಕೃತಿಯನ್ನು ಪರಂಜ್ಯೋತಿಮುನಿಗಳು ರಚಿಸಿದರು. ಈ ಕೃತಿಯಿಂದ ಪಾಂಡ್ಯ ದೊರೆಯ ಈ ಕಥೆಯನ್ನು ಆರಿಸಲಾಗಿದೆ.

2


ಒಂದು ಸಲ ರಾಜಶೇಖರ ಪಾಂಡ್ಯನು ಮದುರೆಯನ್ನು ಆಳುತ್ತಿದ್ದ. ಮದುರೈ ಪಟ್ಟಣದ ಅಧಿದೇವತೆಯಾದ ಸೋಮಸುಂದರನ ಮೇಲೆ ಅವನಿಗೆ ಅಪಾರ ಭಕ್ತಿ.



3


ಮದುರೆಯ ದೇವಾಲಯದಲ್ಲಿ. . . .

ಬೆಳ್ಳಿಯ ದೇವಾಲಯದಲ್ಲಿ ನರ್ತಿಸುವ ದೇವರೇ!
ನನಗೆ ನಿನ್ನ ಮೇಲೆ ಇನ್ನಿಲ್ಲದ ಭಕ್ತಿ. ನರ್ತನವೇ ಅಲ್ಲದೆ,
ಇನ್ನುಳಿದ 63 ಕಲೆಗಳಲ್ಲಿ ನಾನು ನಿಷ್ಣಾತನಾಗಿದ್ದೇನೆ.
ನಾನು ನ್ಯಾಯದಿಂದ ಸ್ವಲ್ಪವೂ ದೂರ ಸರಿಯದೆ ಈ
ನೆಲವನ್ನು ಆಳುತ್ತಿದ್ದೇನೆ. ಇದೆಲ್ಲವೂ ನಿನ್ನ ಕೃಪೆ.



4

ಆಗ ಆ ಪ್ರದೇಶವನ್ನು ಚೋಳ ದೊರೆಯಾದ ಕರಿಕಾಲ ಪೆರುವಳತ್ತಾನ್ ಆಳುತ್ತಿದ್ದ.(ಆಗ ಪಾಂಡ್ಯದೇಶವು ಚೋಳದೇಶಕ್ಕೆ ಅಧೀನವಾಗಿತ್ತು)




5

ಚೋಳದೇಶದ ವಿದ್ವಾಂಸನೊಬ್ಬ ಪಾಂಡ್ಯದೇಶಕ್ಕೆ ಭೇಟಿಯಿತ್ತ.




6
ರಾಜನು ಅವನನ್ನು ಸ್ವಾಗತಿಸಿ, ಸೂಕ್ತವಾದ ಆಸನ ನೀಡಿ ಗೌರವಿಸಿದ. ಅವರಿಬ್ಬರೂ ಮಾತುಕತೆ ಆರಂಭಿಸಿದರು.
ಮಹಾರಾಜ, ನಮ್ಮ ರಾಜ ಎಲ್ಲ 64 ಕಲೆಗಳನ್ನೂ ಕರಗತ ಮಾಡಿಕೊಂಡಿದ್ದಾರೆ. ನಿಮಗೆ 63 ಕಲೆಗಳು ಮಾತ್ರವೇ ತಿಳಿದಿವೆ. ನಿಮಗೆ ನರ್ತನ ಕಲೆ ತಿಳಿದಿಲ್ಲ.
7
ಚೋಳದೇಶದ ಕವಿ ಹೇಳಿದ್ದನ್ನು ಕೇಳಿ ಪಾಂಡ್ಯ ರಾಜನಿಗೆ ಅಪಮಾನವಾಯಿತು. ಅವನು ಕೋಪದಿಂದ ಕೆಂಡಮಂಡಲನಾದ.
ಒಂದು ದಿನ ನಾನು ನರ್ತನದಲ್ಲೂ ಪಳಗುತ್ತೇನೆ. ಇದು ಖಂಡಿತ.
8
ರಾಜನು ನೃತ್ಯಕಲೆಯ ವಿದ್ವಾಂಸರುಗಳನ್ನು ಅರಮನೆಗೆ ಕರೆಸಿಕೊಂಡ. ಅವರೆಲ್ಲರೂ ಅವನಿಗೆ ನೃತ್ಯವನ್ನು ಚೆನ್ನಾಗಿ ಕಲಿಸಿದರು.
9
ರಾಜನಿಗೆ ನೃತ್ಯಕಲೆ ಕರಗತವಾದಾಗ,
ನನಗೆ ಚೆನ್ನಾಗಿ ತರಬೇತಿ ನೀಡಿದ್ದಕ್ಕಾಗಿ ನಿಮಗೆಲ್ಲ ಈ ಉಡುಗೊರೆ ಕೊಡುತ್ತಿದ್ದೇನೆ.
ಮಹಾರಾಜ! ನಮಗೆ ನೀವು ಬೇಕಾದಷ್ಟು ಚಿನ್ನ ಹಾಗೂ ಇತರ ಉಡುಗೊರೆ ನೀಡಿದ್ದೀರಿ.
ರಾಜನ ಕೀರ್ತಿ ಹರಡಲಿ!


10
ಒಂದು ಸಲ ರಾಜಶೇಖರ ಪಾಂಡ್ಯ ನರ್ತಿಸುತ್ತಿದ್ದ.
ಭಗವಂತನೇ ನರ್ತಿಸುತ್ತಿರುವಾಗ ನಾನೂ ನರ್ತಿಸಬೇಕು. ಇದು ನನ್ನ ಕರ್ತವ್ಯ. ಇದೂ ಕೂಡ ಅವನ ಕೃಪೆಯೇ.
11
ರಾಜನು ನರ್ತಿಸುತ್ತ ಬಹಳ ದೀರ್ಘಕಾಲವನ್ನು ಕಳೆಯತೊಡಗಿದ. ಇದರಿಂದ ಅವನ ಆರೋಗ್ಯ ಕೆಡತೊಡಗಿತು. ಆಗ ಅವನು ನಟರಾಜ ದೇವರ ನಾಟ್ಯವನ್ನು ಚಿಂತಿಸತೊಡಗುತ್ತಿದ್ದ.
ಭಗವಂತ! ಈಗ ಸ್ವಲ್ಪ ಹೊತ್ತು ನರ್ತಿಸಿದರೂ ನನಗೆ ದಣಿವಾಗುತ್ತಿದೆ. ನೀನಾದರೋ ಈ ಬೆಳ್ಳಿಯ ದೇವಾಲಯದಲ್ಲಿ ಹಗಲೂ ರಾತ್ರಿ ತಡೆಯಿಲ್ಲದೆ ನರ್ತಿಸುತ್ತಿರುವೆ. ನಿನಗೂ ವಿಪರೀತ ಆಯಾಸವಾಗುತ್ತಿರಬೇಕು. ನಿರಂತರ ನಾಟ್ಯವಾಡಿದ್ದರಿಂದ ನಿನ್ನ ಕಾಲುಗಳು ಆಯಾಸಗೊಂಡಿವೆ ಎಂದು ತಿಳಿದೂ ನಿನ್ನ ಭಕ್ತನಾದ ನಾನು ಸುಮ್ಮನಿರಬೇಕೇ? ದೇವಾ! ನಾನೇನು ಮಾಡಬೇಕು?
12
ಅಂದು ಶಿವರಾತ್ರಿ. ಶಾಸ್ತ್ರಗಳಲ್ಲಿ ಹೇಳಿರುವಂತೆ ರಾಜನು ಶಿವನನ್ನು ಪೂಜಿಸಿದ.
13
ಅನಂತರ ಅವನು ಮದುರೆಯ ಬೆಳ್ಳಿಯ ದೇವಾಲಯಕ್ಕೆ ಹೋದ. ಅವನು ದೇವರ ಮುಂದೆ ಕೈಮುಗಿದು, ಕಣ್ಣೀರು ತುಂಬಿ ನಮಸ್ಕರಿಸಿದ.
ದೇವಾ! ಇಂದು ನಿನ್ನ ನರ್ತನದ ಭಂಗಿಯನ್ನು ಬದಲಾಯಿಸು. ನೆಲವನ್ನು ಮೆಟ್ಟಿರುವ ಕಾಲನ್ನು ಮೇಲೆತ್ತು, ಹಾಗೂ ಮೇಲೆತ್ತಿರುವ ಕಾಲಿನಿಂದ ನೆಲವನ್ನು ತುಳಿ. ನಾವು ಈ ಭಂಗಿಯನ್ನು ನೋಡಬೇಕು. ಆಗ ಮಾತ್ರವೇ ನನ್ನ ಹೃದಯದ ದುಃಖ ಶಮನಗೊಳ್ಳುವುದು. ನೀನು ಹೀಗೆ ಮಾಡದಿದ್ದರೆ, ನಾನು ನನ್ನ ಜೀವವನ್ನೇ ಸಮರ್ಪಿಸಿಬಿಡುತ್ತೇನೆ.

**14**

ಹೀಗೆ ಪ್ರಾರ್ಥಿಸುತ್ತ ರಾಜನು ತನ್ನ ಖಡ್ಗವನ್ನು ನೆಲದಲ್ಲಿ ಊರಿದ. ಅದರ ಮೇಲೆ ಬಿದ್ದು ತನ್ನನ್ನು ತಾನು ಕೊಂದುಕೊಳ್ಳಲು ಸಿದ್ಧನಾದ.



**15**

ಕೂಡಲೇ ಶಿವನು ಅವನ ಪ್ರಾರ್ಥನೆಗೆ ಮಣಿದು, ತನ್ನ ನರ್ತನದ ಭಂಗಿಯನ್ನು ಬದಲಾಯಿಸಿದ. ಎಡಗಾಲನ್ನು ನೆಲದಲ್ಲಿ ಊರಿ, ಬಲಗಾಲನ್ನು ಮೇಲಕ್ಕೆತ್ತಿ ನಾಟ್ಯವಾಡತೊಡಗಿದ.

ಇದನ್ನು ನೋಡಿ ರಾಜನಿಗೆ ಪರಮಾನಂದವಾಯಿತು. ಅವನು ಶಿವನ ಸ್ತುತಿ ಮಾಡತೊಡಗಿದ.



ನೀನು ಈ ಬದಲಾದ ನರ್ತನದ ಭಂಗಿಯನ್ನು ಎಂದೆಂದಿಗೂ ಹೀಗೇ ಇಟ್ಟುಕೊಂಡಿರಬೇಕು ಎಂಬುದೇ ನನ್ನ ಪ್ರಾರ್ಥನೆ. ಅದರಿಂದ ಭಕ್ತರಿಗೆ ತುಂಬ ಲಾಭವುಂಟಾಗುವುದು.

**16**

ರಾಜನ ಪ್ರಾರ್ಥನೆಗೆ ಶಿವನು ಸಮ್ಮತಿಸಿದ. ಅಂದಿನಿಂದ ಬೆಳ್ಳಿ ದೇವಾಲಯದ ಶಿವನು ಭಕ್ತರನ್ನು ಹೀಗೆ ಬದಲಾದ ನರ್ತನ ಭಂಗಿಯಿಂದಲೇ ಅನುಗ್ರಹಿಸುತ್ತಿರುವನು.

